

بسم اللهِ الرّحمٰن الرّحيم

# ಮುಹಬ್ಬತೆ ಇಲಾಹಿ – ಅಲ್ಲಾಹನೊಂದಿಗೆ ಪ್ರೇಮ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, ಹಝ್ರ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್, ಅವರು ಲಂಡನ್‌ನ 'ಬೈತುಲ್ ಫುತೂಹ್' ಮಸೀದಿಯಲ್ಲಿ ನೀಡಿದ ಶುಕ್ರವಾರದ ಖುತುಬದ ಸಾರಾಂಶ– 04.04.2014)

ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ ಹಝ್ರ್‌ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:

ಈ ದಿನ ನಾನು '**ಮುಹಬ್ಬತೆ ಇಲಾಹಿ**' ಅಥವ ಅಲ್ಲಾಹನೊಂದಿಗೆ ಪ್ರೇಮ ಎಂಬ ವಿಷಯದ ಬಗ್ಗೆ ಹಝ್ರ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕೆಲವು ಉಲ್ಲೇಖಗಳನ್ನು ಮತ್ತು ಉಪದೇಶಗಳನ್ನು ನಿಮ್ಮ ಮುಂದೆ ಇರಿಸುವೆನು. ಅವುಗಳಲ್ಲಿ ಅವರು ಅಲ್ಲಾಹನೊಂದಿಗಿರುವ ಪ್ರೇಮದ ವಾಸ್ತವಿಕತೆ ಮತ್ತು ಅದರ ವಿವರಣೆ ನೀಡಿರುವರು. ಅಲ್ಲಾಹನ ಪ್ರೀತಿ ಗಳಿಸುವ ರಹಸ್ಯ ಮತ್ತು ವಿಧಾನಗಳನ್ನೂ ಅದರ ತಳ ಸ್ಪರ್ಶಿ ತತ್ವ ಜ್ಞಾನವನ್ನೂ ವಿವರಿಸಿದ್ದಾರೆ. ಅವರನ್ನು ನಂಬಿರುವ ನಮ್ಮಿಂದ ಎಂದರೆ ಅವರ ಜಮಾಅತಿಗೆ ಸೇರಿದವರಿಂದ ಅವರು ಏನನ್ನು ಪ್ರತೀಕ್ಷಿಸುತ್ತಿದ್ದಾರೆ; ಅಲ್ಲಾಹನ ಪ್ರೀತಿ ಗಳಿಸಲು ನಾವು ಮಾಡಬೇಕಾದ ಪ್ರಯತ್ನಗಳು ಯಾವುವು; ಅವುಗಳು ಯಾವ ಮಟ್ಟದಲ್ಲಿರಬೇಕು ಮೊದಲಾದವುಗಳನ್ನೆಲ್ಲಾ ಹಝ್ರ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ವಿವರಿಸಿದ್ದಾರೆ. ಆದುದರಿಂದ ಅವರ ಪ್ರತಿಯೊಂದು ಉಲ್ಲೇಖಗಳು ಚಿಂತಾರ್ಹವಾಗಿದೆ ಮತ್ತು ಅದು ನಮಗೆ ದಾರಿದೀಪವಾಗಿದೆ. ಆದುದರಿಂದ ಇವುಗಳನ್ನು ಗಮನವಿಟ್ಟು ಆಲಿಸಬೇಕಾದ ಆವಶ್ಯಕತೆ ಇದೆ. ಆ ಮೂಲಕ ನಾವು ಅಲ್ಲಾಹನ ಬಗ್ಗೆ ಪ್ರೀತಿ **(ಮುಹಬ್ಬತೇ ಇಲಾಹೀ)** ಎಂಬ ವಿಷಯದ ಆತ್ಮವನ್ನು ಮನವರಿಕೆ ಮಾಡಿಕೊಂಡು ಮುಂದುವರಿಯುವವರೂ ಅದರಲ್ಲಿ ಅಭಿವೃದ್ಧಿ ಹೊಂದುವವರೂ ಮತ್ತು ನಮ್ಮ ಸುಧಾರಣೆ ಮಾಡುವವರೂ ಆಗಬೇಕು.

ಹಝ್ರ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ಪ್ರೀತಿ ಎನ್ನುವುದು ನಾವು ಸ್ವತಃ ಮಾಡಿಕೊಳ್ಳುವ ಅಥವಾ ತೋರಿಸಿಕೊಳ್ಳುವ ಕೆಲಸವಲ್ಲ. ಅದು ಮನುಷ್ಯನ ಸಹಜವಾದ ಶಕ್ತಿಗಳ ಪೈಕಿ ಒಂದು ಶಕ್ತಿಯಾಗಿದೆ. ಅದರ ವಾಸ್ತವಿಕತೆ ಏನೆಂದರೆ ಹೃದಯ ಒಂದು ವಸ್ತುವನ್ನು ಇಷ್ಟಪಟ್ಟು ಅದರ ಕಡೆಗೆ ಆಕರ್ಷಿಸಲ್ಪಡುವುದೇ ಪ್ರೀತಿಯಾಗಿದೆ. ಒಂದು ವಸ್ತುವಿನ ನಿಜಗುಣವು ಅದು ಪರಿಪೂರ್ಣತೆಯನ್ನು ಗಳಿಸುವಾಗ ಸ್ಪಷ್ಟವಾಗಿ ಮನವರಿಕೆಯಾಗುತ್ತದೆ. ಪ್ರೀತಿಯ ಸ್ಥಿತಿ ಸಹ ಹೀಗೆಯೇ ಆಗಿದೆ. ಅದು ಪರಿಪೂರ್ಣ ಸ್ಥಿತಿಗೆ ತಲಪುವಾಗ ಅದರ ಗುಣವು ಬಹಿರಂಗವಾಗಿ ಪ್ರಕಟವಾಗುತ್ತದೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳುತ್ತಾನೆ. '**ಉಶ್ರಿಬೂ ಫೀ ಖುಲೂಬಿಹಿಮುಲ್ ಇಜ್‌ಲ**' ಎಂದರೆ ಬನೀ ಇಸ್ರಾಯೇಲ್ ಜನರು ಚಿನ್ನದ ಕರುವಿನೊಂದಿಗೆ ಎಂತಹ ಪ್ರೀತಿ ಹೊಂದಿದ್ದರೆಂದರೆ ಕರುವನ್ನು ಅವರಿಗೆ ಶರಬತ್ತಿನ ಹಾಗೆ ಕುಡಿಸಲಾಗಿತ್ತು. ಇದರಿಂದ ತಿಳಿಯುವುದೇನೆಂದರೆ ಯಾರು ಒಬ್ಬನನ್ನು ಪರಿಪೂರ್ಣವಾಗಿ ಪ್ರೀತಿಸುತ್ತಾನೋ ಅವನು ತಾನು ಪ್ರೀತಿಸುತ್ತಿರುವವನನ್ನು ಕುಡಿಯುವಂತೆ ಅಥವಾ ತಿನ್ನುವಂತೆ ಆಗುತ್ತಾನೆ ಮತ್ತು ಅವನ ಗುಣಗಳನ್ನು ತನ್ನಲ್ಲಿ ಅಲವಡಿಸಿಕೊಳ್ಳುತ್ತಾನೆ. ಒಬ್ಬನು ಇನ್ನೊಬ್ಬನನ್ನು ಎಷ್ಟು ಹೆಚ್ಚಿಗೆ ಪ್ರೀತಿಸುತ್ತಾನೋ ಅವನು ಸಹಜವಾಗಿ ತನ್ನ ಪ್ರೀತಿಗೆ ಪಾತ್ರನಾದವನ ಗುಣಗಳ ಕಡೆಗೆ ಸೆಳೆಯಲ್ಪಡುತ್ತಾನೆ. ಕೊನೆಗೆ ಅವನು ತಾನು ಪ್ರೀತಿಸುವವನ ರೂಪವನ್ನು ಹೊಂದುತ್ತಾನೆ. ಇದೊಂದು ರಹಸ್ಯವಾಗಿದೆ. ಯಾರು ಅಲ್ಲಾಹನನ್ನು ಪ್ರೀತಿಸುತ್ತಾನೋ ಅವನು ತನ್ನ ಶಕ್ತಿ ಸಾಮರ್ಥ್ಯಗಳಿಗನುಸಾರವಾಗಿ ನೆರಳಿನ ರೂಪದಲ್ಲಿ ಅಲ್ಲಾಹನಲ್ಲಿರುವ ಪ್ರಕಾಶವನ್ನು ಪಡೆಯುತ್ತಾನೆ. ಶೈತಾನನನ್ನು ಪ್ರೀತಿಸುವವನು ಶೈತಾನನಲ್ಲಿರುವ ಅಂಧಕಾರವನ್ನು ಪಡೆದುಕೊಳ್ಳುತ್ತಾನೆ. ಇದೇ ಪ್ರೀತಿಯ ರಹಸ್ಯವಾಗಿದೆ. ಅಲ್ಲಾಹನ ಗುಣಗಳನ್ನು ಹೊಂದಲು ಅದರ ಬಗ್ಗೆ ಜ್ಞಾನಗಳಿಸಬೇಕಾದುದು ಅತೀ ಅಗತ್ಯ. ಅಲ್ಲಾಹನ ಗುಣಗಳು ಯಾವುವು ಎಂದು ತಿಳಿಯದೆ ಅವುಗಳ ಬಗ್ಗೆ ಜ್ಞಾನ ಗಳಿಸಲು ಸಾಧ್ಯವಾಗದು. ಜ್ಞಾನ ಗಳಿಸಿದ ನಂತರ ಮನುಷ್ಯನು ಮುಂದೆ ಸಾಗುವುದೇ ಪ್ರೀತಿಯಾಗಿದೆ. ಪ್ರೀತಿ ಪರಿಪೂರ್ಣವಾಗುವುದು ಅಲ್ಲಾಹನ ಗುಣಗಳನ್ನು ತನ್ನಲ್ಲಿ ಅಳವಡಿಸಿಕೊಳ್ಳುವಾಗ ಮಾತ್ರ. ಅಲ್ಲಾಹನ ಗುಣಗಳ ಬಗ್ಗೆ ಕೇವಲ ಜ್ಞಾನ ಗಳಿಸಿದರೆ ಸಾಕಾಗಲಾರದು. ಅವುಗಳನ್ನು ತನ್ನಲ್ಲಿ ಉಂಟುಮಾಡಬೇಕು. ಅಲ್ಲಾಹನ ಬಣ್ಣದಲ್ಲಿ ಬಣ್ಣಗಳಿಸಿದವನಾಗಬೇಕು. ಆಗ ಅಲ್ಲಾಹನ ಪ್ರಕಾಶ ಲಭಿಸುತ್ತದೆ.

ಹಝ್ರ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ:

ಅಲ್ಲಾಹನನ್ನು ಅನುಸರಿಸುವವರು ಮೂರು ವಿಧಗಳಲ್ಲಿರುತ್ತಾರೆ. ಮೊದಲನೆಯವರ ಭಾವನೆ ಈರೀತಿಯಿರುತ್ತದೆ: ಅಲ್ಲಾಹನು ರೂಪಧಾರಣೆ ಮಾಡಿ ಕಾಣಿಸುವುದಿಲ್ಲ. ಆದರೆ ಲೌಕಿಕ ಸಾಮಾಗ್ರಿಗಳು ಕಾಣಿಸುತ್ತವೆ. ಅವುಗಳ ಬಗ್ಗೆ ಮನುಷ್ಯನಿಗೆ ಮಾಹಿತಿ ಲಭಿಸಿರುತ್ತದೆ. ಅವುಗಳನ್ನು ಅವನು ಸ್ಪರ್ಶಿಸಿ ಮನವರಿಕೆ ಮಾಡಿಕೊಳ್ಳುತ್ತಾನೆ. ಲೌಕಿಕ ವಸ್ತುಗಳು ಎದುರಿಗೆ ಕಾಣಿಸುವಾಗ ಅವುಗಳನ್ನು ಸೃಷ್ಟಿಸಿದವನು ಒಬ್ಬನಿದ್ದಾನೆಂಬ ಭಾವನೆ ಅವರ ಮನಸ್ಸಿನಲ್ಲಿ ಬರುವುದಿಲ್ಲ. ದೇವನು ಅವುಗಳನ್ನು ಸೃಷ್ಟಿಸಿರುವನೆಂಬ ಭಾವನೆ ಇರುವುದಿಲ್ಲ. ಆದುದರಿಂದ ಅವರು ಲೌಕಿಕ ಸಾಮಾಗ್ರಿಗಳನ್ನು ಹೆಚ್ಚಿಗೆ ಪ್ರೀತಿಸುತ್ತಾರೆ. ದೇವನು ಮಾಡಿದ ಅನುಗ್ರಹಗಳನ್ನು ಮನವರಿಕೆ ಮಾಡಿಕೊಳ್ಳುವ ಮೂಲಕ ಉಂಟಾಗಬಹುದಾದ ಉತ್ಸಾಹ ಅವರಲ್ಲಿರುವುದಿಲ್ಲ. ತನಗೆ ದಯಪಾಲಿಸಿದ ಅನುಗ್ರಹಗಳ ಬಗ್ಗೆ ತಿಳಿದುಕೊಂಡು ಉಂಟಾಗಬಹುದಾದ ಪ್ರೀತಿ ಅವರಲ್ಲಿ ಉಂಟಾಗುವುದಿಲ್ಲ. ಅವರು ಕೇವಲ ಸ್ವಲ್ಪ ಮಟ್ಟಿಗೆ ಅಲ್ಲಾಹನು ಸೃಷ್ಟಿಕರ್ತ ಎಂಬುದನ್ನು ಅಂಗೀಕರಿಸುತ್ತಾರೆ. (ಅವರು ಅಲ್ಲಾಹನು ನೀಡಿದ ಔದಾರ್ಯಗಳನ್ನು ಒಪ್ಪುದಿಲ್ಲವಾದರೂ ನಾವು ಮುಸ್ಲಿಮರು ಎಂದೂ ಅಲ್ಲಾಹನು ಸೃಷ್ಟಿಕರ್ತ ಎಂದೂ ಒಪ್ಪಿಕೊಳ್ಳುತ್ತಾರೆ. ಅಲ್ಲಾಹನು ನಮ್ಮನ್ನು ಸೃಷ್ಟಿಸಿದನು ಎಂದು ಹೇಳುತ್ತಾರೆ) ಅಲ್ಲಾಹನು ಮಾಡಿದ ಅನುಗ್ರಹಗಳ ತಪಶೀಲುಗಳ ಬಗ್ಗೆ ದೃಷ್ಟಿ ಹಾಯಿಸಿದರೆ ಆ ಅನುಗ್ರಹದಾತನು ಮನುಷ್ಯನ ಮುಂದೆ ಕಾಣಿಸಿಕೊಳ್ಳುತ್ತಾನೆ. ಆದರೆ ಇಂತಹ ಜನರು ಅದನ್ನು ಕಾಣುವುದಿಲ್ಲ (ಅವರು ಒಟ್ಟಾರೆಯಾಗಿ ನಾವು ಅಲ್ಲಾಹನನ್ನು ನಂಬುತ್ತೇವೆ ಎಂದು ಹೇಳುತ್ತಾರೆ. ಅವನನ್ನು ಪ್ರೀತಿಸುತ್ತೇವೆ ಎಂದೂ ಹೇಳುತ್ತಾರೆ. ಅವರು ಅಲ್ಲಾಹನು ನೀಡಿದ ಅನುಗ್ರಹಗಳಿಂದ ಲಾಭ ಪಡೆಯುವಾಗ ಅಲ್ಲಾಹನು ನೀಡಿದ ಅನುಗ್ರಹಗಳ ಬಗ್ಗೆ ಪ್ರಜ್ಞೆ ಹೊಂದಿರುವುದಿಲ್ಲ. ಅವರು ಲೌಕಿಕ ಸಾಮಾಗ್ರಿಗಳ ಬಗ್ಗೆ ಮಾತ್ರ ಚಿಂತಿಸುತ್ತಾರೆ). ಈ ಜನರು ಲೌಕಿಕ ವಸ್ತುಗಳನ್ನು ಅವಲಂಬಿಸಿ ಅವುಗಳನ್ನು ಆರಾಧಿಸುವುದರಿಂದ ಅವರಿಗೆ ಆ ವಸ್ತುಗಳನ್ನು

ಸೃಷ್ಟಿಸಿದವನು ಕಣ್ಣಿಗೆ ಕಾಣಿಸುವುದಿಲ್ಲ. ಆದುದರಿಂದ ಸಾಮಾಗ್ರಿಗಳನ್ನು ವಾಸ್ತವಿಕವಾಗಿ ನೀಡಿದವನ ಸೌಂದರ್ಯ ಅವರಿಗೆ ತಿಳಿಯುವುದಿಲ್ಲ. ಅವರು ಈ ಕಾರಣದಿಂದ ಅಲ್ಲಾಹನನ್ನು ಪ್ರೀತಿಸಬೇಕಾದ ರೀತಿಯಲ್ಲಿ ಪ್ರೀತಿಸುವುದಿಲ್ಲ. ಅವರಿಗೆ ಅಲ್ಲಾಹನ ಬಗ್ಗೆ ಇರುವ ಜ್ಞಾನವು ಅಸ್ಪಷ್ಟವಾಗಿರುತ್ತದೆ. ಅವರು ತಮ್ಮ ದುಡಿಮೆ ಮತ್ತು ತಮ್ಮ ಸಾಧನ ಸಂಪತ್ತುಗಳ ಮೇಲೆ ಭರವಸೆ ಹೊಂದಿರುತ್ತಾರೆ. ಹಾಗಿದ್ದರೂ ಅವರು ಅಲ್ಲಾಹನು ತಮ್ಮ ಸೃಷ್ಟಿಕರ್ತನೆಂದೂ ತಮಗೆ ಆಹಾರ ಒದಗಿಸುತ್ತಾನೆಂದೂ ನಂಬುತ್ತಾರೆ. (ಅವರಿಗೆ ಪೂರ್ಣ ಜ್ಞಾನ ಲಭಿಸಿಲ್ಲ, ಅವರು ಅಲ್ಲಾಹನು ಸೃಷ್ಟಿಕರ್ತನೆಂದೂ ಆಹಾರ ನೀಡುವವನೆಂದೂ ನಂಬುವುದರಿಂದ ಅವರು ಸಾಧ್ಯವಿರುವಷ್ಟು ಅಲ್ಲಾಹನಿಗೆ ಕೃತಜ್ಞರಾಗಿರಬೇಕೆಂದು ಅಲ್ಲಾಹನು ಇಚ್ಛಿಸುತ್ತಾನೆ) ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳಿದ ಹಾಗೆ **'ಇನ್ನಲ್ಲಾಹ ಯಅ್‌ಮುರು ಬಿಲ್ ಅದ್‌ಲಿ'**– ನಿಶ್ಚಯವಾಗಿ ಅಲ್ಲಾಹನು **'ಅದ್‌ಲ್'** ಬಗ್ಗೆ ಆಜ್ಞಾಪಿಸುತ್ತಾನೆ ಎಂದು ಹೇಳಿದುದು ಈ ಜನರ ಸ್ಥಿತಿಯ ಬಗ್ಗೆ ಆಗಿದೆ. ಅಲ್ಲಾಹನು ಅವರೊಂದಿಗೆ ಅವರ ಈ ಸ್ಥಿತಿಗೆ ಸಮಾನವಾಗಿ ವರ್ತಿಸುತ್ತಾನೆ.

ಮನುಷ್ಯನು ಅಲ್ಲಾಹನ ಬಗ್ಗೆ ಜ್ಞಾನ ಗಳಿಸಿದ ಇನ್ನೊಂದು ಮಟ್ಟವೇನೆಂದರೆ ಮನುಷ್ಯನು ಲೌಕಿಕ ಸಾಮಾಗ್ರಿಗಳ ಕಡೆಗೆ ನೋಡದೆ ಅಲ್ಲಾಹನ ಅನುಗ್ರಹಗಳನ್ನು ಮಾತ್ರ ನೋಡುತ್ತಾನೆ. ಅವನು ಸಾಮಾಗ್ರಿಗಳ ಪರದೆಯಿಂದ ಪೂರ್ಣವಾಗಿ ಹೊರಗೆ ಬರುತ್ತಾನೆ: ಅವನು ಹೀಗೆ ಹೇಳಲಾರನು. ನಾನು ನೀರು ಹಾಯಿಸಿದುದರಿಂದ ನನ್ನ ಬೆಳೆ ಬೆಳೆಯಿತು. ನನ್ನ ದುಡಿಮೆಯಿಂದಲೇ ನನಗೆ ಈ ಜಯ ಲಭಿಸಿತು. ಝೈದನು ನನಗೆ ಸಹಾಯ ಮಾಡಿದುದರಿಂದ ಆ ಕೆಲಸ ಈಡೇರಿತು. ಬಕರ್ ರಕ್ಷಿಸಿದ ಕಾರಣವೇ ನಾನು ರಕ್ಷಿಸಲ್ಪಟ್ಟೆ ಎಂದೆಲ್ಲಾ ಹೇಳಲಾರನು. ಇವೆಲ್ಲಾ ನಿರರ್ಥಕ ಮಾತುಗಳೆಂದು ಅವನಿಗೆ ತಿಳಿದಿರುತ್ತದೆ. ಅವನಿಗೆ ಒಂದೇ ಶಕ್ತಿ, ಒಬ್ಬನೇ ಹಿತೈಷಿ, ಒಂದೇ ನೆರವಿನ ಹಸ್ತ ಕಾಣಿಸುವುದು. ಮನುಷ್ಯನು ಸಾಮಾಗ್ರಿಗಳ ಬಹುದೇವಾರಾಧನೆ (ಶಿರ್ಕ್) ಎಂಬ ಧೂಳಿನಿಂದ ಮುಕ್ತನಾಗಿ ಅಲ್ಲಾಹನ ಉಪಕಾರಗಳನ್ನು ನೋಡುವಾಗ ಅದು ಸ್ಪಷ್ಟವೂ ಖಂಡಿತವೂ ಆಗಿ ಕಾಣಿಸುತ್ತದೆ. ಆಗ ಅಲ್ಲಾಹನು ಅವನಿಗೆ ಅದೃಶ್ಯವಾಗಿರುವುದಿಲ್ಲ. ಅಲ್ಲಾಹನು ಅವನಿಗೆ ಕಾಣಿಸುತ್ತಾನೆ. ಅವನು ಅಲ್ಲಾಹನನ್ನು ನೋಡುತ್ತಾನೆ. ಈ ಸ್ಥಿತಿಯನ್ನು ಪವಿತ್ರ ಖುರ್‌ಆನ್‌ನಲ್ಲಿ **'ಇಹ್‌ಸಾನ್'** ಎಂದು ಹೇಳಲಾಗಿದೆ. ಬುಖಾರಿ ಮತ್ತು ಮುಸ್ಲಿಮ್ ಹದೀಸು ಗ್ರಂಥಗಳಲ್ಲಿ ವರದಿಯಾದ ಹದೀಸುಗಳಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸ್ಸಲ್ಲಮರು **'ಇಹ್‌ಸಾನ್'** ಎಂಬ ಪದಕ್ಕೆ ಇದೇ ಅರ್ಥ ವಿವರಣೆ ನೀಡಿದ್ದಾರೆ.

ಮನುಷ್ಯನ ಇನ್ನೊಂದು ಮಟ್ಟ **'ಈತಾಯಿಝಿಲ್ ಖುರ್‌ಬಾ'** ಆಗಿದೆ. ಇದರ ವಿವರಣೆ ಹೀಗಿದೆ: ಮನುಷ್ಯನು ಅಲ್ಲಾಹನ ಉಪಕಾರಗಳನ್ನು ಲೌಕಿಕ ಸಾಮಾಗ್ರಿಗಳಿಗೆ ಸ್ಥಾನ ನೀಡದೆ ನೋಡುತ್ತಾ ಮುಂದುವರಿದರೆ ಮತ್ತು ಅವನ ಆರಾಧನೆಯಲ್ಲಿ ಮಗ್ನನಾದರೆ ಅವನಲ್ಲಿ ಅಲ್ಲಾಹನ ಬಗ್ಗೆ ಗಾಢವಾದ ಪ್ರೀತಿ ಉಂಟಾಗುತ್ತದೆ. ಆಗ ಅವನು ಅನುಗ್ರಹಗಳ ಬಗ್ಗೆ ಯೋಚನೆ ಮಾಡದೆ ವೈಯಕ್ತಿಕ ಪ್ರೀತಿಯಲ್ಲಿ ತಲ್ಲೀನನಾಗುತ್ತಾನೆ. ಒಂದು ಮಗುವಿಗೆ ತನ್ನ ತಾಯಿಯೊಂದಿಗಿರುವ ಸಹಜವಾದ ಪ್ರೀತಿಯ ಹಾಗೆ ಅವನ ಪ್ರೀತಿ ಪರಿಣಮಿಸುತ್ತದೆ. ಈ ಸ್ಥಿತಿ ಪ್ರಾಪ್ತಿಸಿದವನು ಆರಾಧನೆ ಮಾಡುವಾಗ ಅಲ್ಲಾಹನನ್ನು ಕೇವಲ ನೋಡುತ್ತಾನೆ. ಮಾತ್ರವಲ್ಲ ತನ್ನ ಪ್ರೀತಿಗೆ ಪಾತ್ರನಾದವನನ್ನು ಕಂಡ ಪ್ರೇಮಿಯ ಹಾಗೆ ಸುಖ ಸಂತೋಷವನ್ನೂ ಅನುಭವಿಸುತ್ತಾನೆ. ಅವನ ಎಲ್ಲಾ ಪ್ರಾಪಂಚಿಕ ಆಶಾಭಿಲಾಷೆಗಳು ಕೊನೆಗೊಂಡು ಅವನಲ್ಲಿ ಅಲ್ಲಾಹನ ಬಗ್ಗೆ ವೈಯಕ್ತಿಕ ಪ್ರೇಮ ಉಂಟಾಗುತ್ತದೆ. ಮನುಷ್ಯನು ಆಧ್ಯಾತ್ಮಿಕವಾಗಿ ಗಳಿಸುವ ಈ ಉನ್ನತ ಪದವಿಯನ್ನು ಅಲ್ಲಾಹನು **'ಈತಾಯಿಝಿಲ್ ಖುರ್‌ಬಾ'** ಎಂದು ಹೆಸರಿಸಿದ್ದಾನೆ. ಇದರ ಬಗ್ಗೆ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ **'ಫಝ್‌ಕುರುಲ್ಲಾಹ ಕ ಝಿಕ್ರಿಕುಮ್ ಆಬಾಯಿಕುಮ್ ಅವ್ ಅಶದ್ದ ಝಿಕ'** ''ನೀವು ನಿಮ್ಮ ತಂದೆ ತಾತಂದಿರನ್ನು ಸ್ಮರಿಸುವಂತೆ ಅಲ್ಲಾಹನನ್ನು ಸ್ಮರಿಸಿರಿ. ಅಥವಾ ಅದಕ್ಕಿಂತ ಹೆಚ್ಚು.'' ಎಂದು ಹೇಳಿರುವನು.

ಒಟ್ಟಿನಲ್ಲಿ ಇದು ಪವಿತ್ರ ಖುರ್‌ಆನ್‌ನಿನ **'ಇನ್ನಲ್ಲಾಹ ಯಅ್‌ಮುರು ಬಿಲ್ ಅದ್‌ಲಿ ವಲ್ ಇಹ್‌ಸಾನಿ ವ ಈತಾಯಿಝಿಲ್ ಖುರ್‌ಬಾ'** ಎಂಬ ವಚನದ ವ್ಯಾಖ್ಯಾನವಾಗಿದೆ. ಈ ವಚನದಲ್ಲಿ ಮನುಷ್ಯನ ಮೂರು ಆಧ್ಯಾತ್ಮಿಕ ಮಟ್ಟಗಳನ್ನು ವಿವರಿಸಿ ಮೂರನೆಯ ಆಧ್ಯಾತ್ಮಿಕ ಪದವಿಯನ್ನು ಗಳಿಸಿದವನು ವೈಯಕ್ತಿಕ ಪ್ರೀತಿಯನ್ನು ಹೊಂದಿದವನೆಂದು ಅಲ್ಲಾಹನು ಹೇಳಿದ್ದಾನೆ. ಈ ಪದವಿಗೆ ತಲಪಿದವನ ಎಲ್ಲಾ ಪ್ರಾಪಂಚಿಕ ಆಶಾಭಿಲಾಷೆಗಳು ಸುಟ್ಟು ಹೋಗುತ್ತವೆ ಮತ್ತು ಹೃದಯ ಅಲ್ಲಾಹನ ಬಗ್ಗೆ ಪ್ರೇಮದಿಂದ ಹೇಗೆ ತುಂಬಿರುತ್ತದೆ ಎಂದರೆ ಸುಗಂಧ ದ್ರವ್ಯ ತುಂಬಿದ ಶೀಷೆಯ ಹಾಗೆ. ಈ ಪದವಿಯ ಕಡೆಗೆ ಪವಿತ್ರ ಖುರ್‌ಆನಿನ ಈ ಕೆಳಗಿನ ವಚನ ಸಹ ಬೆಳಕು ಬೀರುತ್ತದೆ:

**'ವ ಮಿನನ್ನಾಸಿ ಮನ್ ಯಶ್‌ರೀ ನಫ್ಸಹುಬ್‌ತಿಗಾಅ ಮರಲಾತಿಲ್ಲಾಹಿ ವಲ್ಲಾಹು ರಊಫುನ್ ಬಿಲ್ ಇಬಾದ್'** ಎಂದರೆ ಕೆಲವು ಸತ್ಯ ವಿಶ್ವಾಸಿಗಳು ತಮ್ಮ ಜೀವಗಳನ್ನು ಅಲ್ಲಾಹನ ಸಂಪ್ರೀತಿಗಳಿಸಲು ಮಾರಾಟ ಮಾಡುತ್ತಾರೆ. ಅಲ್ಲಾಹನು ಅಂತಹವರ ಮೇಲೆ ದಯೆದೋರುತ್ತಾನೆ.

ಇನ್ನೊಂದು ಪವಿತ್ರ ಖುರ್‌ಆನ್ ವಚನದಲ್ಲಿ ಅಲ್ಲಾಹನು ಹೇಳುತ್ತಾನೆ:

**'ಬಲಾ ಮನ್ ಅಸ್‌ಲಮ ವಜ್‌ಹಹೂ ಲಿಲ್ಲಾಹಿ ವ ಹೂವ ಮುಹ್‌ಸಿನುನ್ ಫಲಹೂ ಅಜ್‌ರಹೂ ಇಂದ ರಬ್ಬಿಹೀ ವಲಾ ಖೌಫುನ್ ಅಲೈಹಿಮ್ ವಲಾಹುಮ್ ಯಹ್‌ಝುನೂನ್'**- ಅಲ್ಲಾಹನಿಗೆ ತನ್ನನ್ನು ಅರ್ಪಿಸಿಕೊಳ್ಳುವವರು ಮೋಕ್ಷಗಳಿಸಿದವರಾಗಿದ್ದಾರೆ. ಅವರು ಅಲ್ಲಾಹನ ಅನುಗ್ರಹಗಳನ್ನು ನೆನಪಿಸಿ ಅವನನ್ನು ಹೇಗೆ ಆರಾಧಿಸುತ್ತಾರೆಂದರೆ ಅವನನ್ನು ನೋಡುತ್ತಿರುವರೋ ಎಂಬಂತೆ. ಇಂತಹ ಜನರು ಅಲ್ಲಾಹನ ಸನ್ನಿಧಿಯಲ್ಲಿ ಪ್ರತಿಫಲ ಪಡೆಯುವರು. ಅವರಿಗೆ ದುಃಖವಾಗಲಿ ಭಯವಾಗಲಿ ಇರಲಾರದು.

ಅವರ ಉದ್ದೇಶಲಕ್ಷ್ಯ ಅಲ್ಲಾಹನನ್ನು ಮತ್ತು ಅವನ ಸಂಪ್ರೀತಿಯನ್ನು ಗಳಿಸುವುದಾಗಿರುತ್ತದೆ. ಅಲ್ಲಾಹನ ಸಾನಿಧ್ಯಗಳಿಸುವುದು ಅವರ ಪ್ರತಿಫಲವಾಗಿರುತ್ತದೆ.

ಅಲ್ಲಾಹನ ಸಾನಿಧ್ಯವನ್ನು ಪಡೆಯುವ ಮಾರ್ಗದ ಬಗ್ಗೆ ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ:

ಪವಿತ್ರ ಖುರ್‌ಆನ್ ಇಹಲೋಕದಲ್ಲಿ ಅಲ್ಲಾಹನ ದರ್ಶನ ಭಾಗ್ಯ ಪಡೆಯುವ ವಿಧಾನವನ್ನು ಹೀಗೆ ವಿವರಿಸಿದೆ.

**'ಮನ್‌ಕಾನ ಯರ್‌ಜೂ ಲಿಖಾಅ ರಬ್ಬಿಹೀ ಫಲ್ ಯಅಮಲ್ ಅಮಲನ್ ಸಾಲಿಹನ್ ವಲಾ ಯುಶ್‌ರಿಕ್ ಬಿ ಇಬಾದತಿ ರಬ್ಬಿಹೀ ಅಹದಾ'–** ಎಂದರೆ ಯಾರು ಇಹಲೋಕದಲ್ಲಿ ಅಲ್ಲಾಹನ ದರ್ಶನ ಪಡೆಯಲು ಇಚ್ಛಿಸುತ್ತಾರೋ ಅವನು ಎಂತಹ ಸತ್ಕರ್ಮಗಳನ್ನು ಮಾಡಬೇಕೆಂದರೆ ಅದರಲ್ಲಿ ಯಾವುದೇ ಕುಂದುಕೊರತೆ ಇರಬಾರದು. ಅಂದರೆ ಅವನು ಜನರಿಗೆ ತೋರಿಸಲಿಕ್ಕಾಗಿ ಅಥವಾ ಅಹಂಭಾವದಿಂದ ಸತ್ಕರ್ಮ ಮಾಡಬಾರದು. ಅದನ್ನು ನಿಷ್ಠೆಯಿಂದಲೂ ಭಕ್ತಿಯಿಂದಲೂ ಮಾಡಬೇಕು. ಜೊತೆಗೆ ಅವನು ಎಲ್ಲಾ ರೀತಿಯ ಬಹುದೇವಾರಾಧನೆಯಿಂದ ದೂರವಿರಬೇಕು. ಯಾವುದೇ ಲೌಕಿಕ ಸಾಧನ ಸಾಮಾಗ್ರಿಗಳನ್ನು ಆರಾಧಿಸುವವನಾಗಬಾರದು ಹಾಗೂ ಅವುಗಳ ಮೇಲೆ ಭರವಸೆ ಇಡುವವನಾಗಬಾರದು. ಯಾವಾಗಲೂ ಅಲ್ಲಾಹನ ಸನ್ನಿಧಿಯಲ್ಲಿ ಅವನ ಆತ್ಮ ಸಾಷ್ಟಾಂಗ ಪ್ರಣಾಮ ಮಾಡುತ್ತಾ ಇರಬೇಕು. ಪ್ರಾರ್ಥನೆಗಳ ಮೂಲಕ ಅಲ್ಲಾಹನ ಅನುಗ್ರಹವನ್ನು ಬೇಡಿಕೊಳ್ಳಬೇಕು. ಅವನು ಕೈ ಕಾಲುಗಳು ಇಲ್ಲದ ಓರ್ವ ವ್ಯಕ್ತಿ ಬಾಯಾರಿಕೆಯಿಂದ ಬಳಲುವ ರೀತಿಯಲ್ಲಿ ಆಗಬೇಕು. ಅವನ ಮುಂದೆ ಸಿಹಿ ನೀರಿನ ಒಂದು ಕಾರಂಜಿ ಕಾಣಿಸುತ್ತದೆ. ಅವನು ಹೇಗೋ ಆ ಕಾರಂಜಿಯ ಸಮೀಪಕ್ಕೆ ನರಳುತ್ತಾ ಹೋಗುತ್ತಾನೆ. ಅವನು ತನ್ನ ತುಟಿಗಳನ್ನು ಆ ಕಾರಂಜಿಗೆ ತಗಲಿಸಿಕೊಂಡು ನೀರನ್ನು ಕುಡಿದು ಬಾಯಾರಿಕೆ ನಿವಾರಿಸುವ ಹಾಗೆ.

ಸತ್ಯ ವಿಶ್ವಾಸಿ ಪ್ರೇಮಿಯ ಹಾಗೆ ಇರುತ್ತಾನೆ. ಅವನು ಸತ್ಯವಾಗಿ ಪ್ರೀತಿಸುವವನಾಗಿರುತ್ತಾನೆ. ಅವನು ಅಲ್ಲಾಹನನ್ನು ನಿಷ್ಠೆಯಿಂದ ಪ್ರೀತಿಸುವವನೂ ಅವನಿಗೋಸ್ಕರ ಜೀವವನ್ನು ಸಹ ಅರ್ಪಿಸಲು ಸಿದ್ಧನಾಗಿರುವವನೂ ಆಗಿರುತ್ತಾನೆ. ಅವನು ವಿನಯದಿಂದಲೂ ಸ್ಥಿರತೆಯಿಂದಲೂ ಅಲ್ಲಾಹನ ಸನ್ನಿಧಿಯಲ್ಲಿ ನಿಲ್ಲುತ್ತಾನೆ. ಲೌಕಿಕವಾದ ಯಾವುದೇ ರುಚಿ ಅವನಿಗೆ ರುಚಿಸುವುದಿಲ್ಲ. ಅವನ ಆತ್ಮ ಅಲ್ಲಾಹನ ಪ್ರೀತಿಯಲ್ಲಿ ಪೋಷಿಸಲ್ಪಡುತ್ತದೆ. ತನ್ನ ಪ್ರೀತಿಗೆ ಪಾತ್ರನಾದವನು ತನ್ನನ್ನು ಗಮನಿಸದಿದ್ದರೆ ಸಹ ಅವನು ಗಾಬರಿಗೊಳ್ಳುವುದಿಲ್ಲ. ತಾನು ಪ್ರೀತಿಸುವವನು ಮೌನವಾಗಿದ್ದ ತನ್ನೊಂದಿಗೆ ನಿರ್ಲಕ್ಷ್ಯತೆ ಪ್ರಕಟಿಸಿದರೂ ಅವನು ಧೈರ್ಯಗೆಡಲಾರನು. ಅವನು ಯಾವಾಗಲೂ ಹೆಜ್ಜೆ ಮುಂದಿಡುತ್ತಾನೆ. ಹೃದಯದಲ್ಲಿ ಹೆಚ್ಚು ಹೆಚ್ಚಾಗಿ ನೋವನ್ನು ಹೊಂದುತ್ತಾನೆ. ಸತ್ಯ ವಿಶ್ವಾಸಿ ಪ್ರೇಮಿಯಾಗಿ ಆ ಪ್ರೇಮದಲ್ಲಿ ಮುಳುಗಿರಬೇಕು. ಪ್ರೀತಿ ಪರಿಪೂರ್ಣವಾಗಿರಬೇಕು. ಅದರಲ್ಲಿ ಸತ್ಯವಾದ ಭಾವಾವೇಶವಿರಬೇಕು. ಅವನು ಸ್ಥಿರಚಿತ್ತನಾಗಿರಬೇಕು. ಯಾವುದೇ ದುಃಖ ಈ ಪ್ರೀತಿಯನ್ನು ಸುಟ್ಟು ಹಾಕಬಾರದು.

ಪ್ರೀತಿಗೆ ಪಾತ್ರನಾದವನಿಂದ ಕೆಲವು ಸಾರಿ ನಿರ್ಲಕ್ಷ್ಯತೆ ಮತ್ತು ಮೌನ ಕಾಣಿಸಬಹುದು. ಅದು ಎರಡು ರೀತಿಗಳಲ್ಲಿ ಇರುತ್ತವೆ. ಒಂದು ಅಲ್ಲಾಹನ ಪ್ರೀತಿ ಗಳಿಸುವ ಬಗ್ಗೆ ಹೃದಯದಲ್ಲಿ ಉಂಟಾಗುವ ನೋವು. ಇನ್ನೊಂದು ಯಾರದಾದರೂ ಕಷ್ಟ ಕಂಡಾಗ ಹೃದಯದಲ್ಲಿ ನೋವು ಉಂಟಾಗಿ ಅವನಿಗೆ ಒಳಿತು ಮಾಡಲು ಇಚ್ಛೆ ಉಂಟಾಗುವುದು. ಅವನಿಗೆ ಸಹಾಯ ಮಾಡಲು ಮಾನಸಿಕ ಆತಂಕ ತಲೆದೋರುವುದು. ಅಲ್ಲಾಹನ ಪ್ರೀತಿಗಳಿಸಲು ಅಭಿಲಾಷೆ ಮತ್ತು ನೋವು ಉಂಟಾಗಿ ಅದರ ಜೊತೆ ಸ್ಥಿರ ಪ್ರಯತ್ನ ಉಂಟಾದರೆ ಅದು ಮನುಷ್ಯನನ್ನು ಮನುಷ್ಯತ್ವದಿಂದ ಪ್ರತ್ಯೇಕಿಸಿ ದೇವನ ನೆರಳಿಗೆ ಒಯ್ಯುತ್ತದೆ. ಮನುಷ್ಯನು ಇಂತಹ ನೋವು ಮತ್ತು ಪ್ರೀತಿಯನ್ನು ಹೃದಯದಲ್ಲಿ ಹೊಂದುವ ತನಕ ಅವನು ಅಪಾಯಕರ ಸ್ಥಿತಿಯಲ್ಲಿ ಇರುತ್ತಾನೆ. ಮನುಷ್ಯನು ಅಲ್ಲಾಹೇತರರಿಂದ ಪರಿಪೂರ್ಣ ಸಂಬಂಧ ವಿಚ್ಛೇಧಿಸುವ ತನಕ ಈ ಅಪಾಯ ಇರುತ್ತದೆ. ಅವನು ಅಲ್ಲಾಹನಿಗೆ ಸೇರಿದವನೇ ಆಗಬೇಕು. ಅಲ್ಲಾಹನ ಸೃಷ್ಟಿಗಳ ಬಗ್ಗೆ ಎಂತಹ ನೋವನ್ನು ಹೊಂದಬೇಕೆಂದರೆ ಓರ್ವ ತಾಯಿ ತನ್ನ ಬಲಹೀನ ಪ್ರಿಯ ಮಗುವಿನ ಬಗ್ಗೆ ತನ್ನ ಹೃದಯದಲ್ಲಿ ಪ್ರೇಮಭರಿತಳಾಗಿರುವ ಹಾಗೆ. ಎಂದರೆ ಅಲ್ಲಾಹೇತರರೊಂದಿಗೆ ಸಂಪೂರ್ಣ ಸಂಬಂಧ ವಿಚ್ಛೇಧಿಸಬೇಕು ಮತ್ತು ಅದರೊಂದಿಗೆ ಅಲ್ಲಾಹನ ಸೃಷ್ಟಿಗಳ ಬಗ್ಗೆ ನೋವನ್ನೂ ಹೊಂದಬೇಕು. ಇದು ಒಬ್ಬ ನಿಜವಾದ ವಿಶ್ವಾಸಿಯ ಹೃದಯದಲ್ಲಿ ಉಂಟಾಗಬೇಕಾದ ಭಾವನೆಯಾಗಿದೆ. ಅವನೇ ಅಲ್ಲಾಹನನ್ನು ಪ್ರೀತಿಸುವವನಾಗಿರುತ್ತಾನೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಇನ್ನೊಂದು ಕಡೆ ಹೀಗೆ ಹೇಳುತ್ತಾರೆ:

ಅಲ್ಲಾಹನ ಅಸ್ತಿತ್ವದ ಬಗ್ಗೆ ಮತ್ತು ಅವನ ಮಹಿಮೆ ಬಗ್ಗೆ ಇರುವ ನಂಬಿಕೆಗೆ ಅನುಸಾರವಾಗಿ ಮನುಷ್ಯನಲ್ಲಿ ಅವನ ಮೇಲೆ ಪ್ರೀತಿ ಮತ್ತು ಭಯ ಉಂಟಾಗುವುದು. ಅಲ್ಲಾಹನ ಕುರಿತು ನಿರ್ಲಕ್ಷ್ಯತೆ ಹೊಂದಿದರೆ ಅಪರಾಧ ಮಾಡಲು ಧೈರ್ಯ ಉಂಟಾಗುವುದು. ಅಲ್ಲಾಹನ ಬಗ್ಗೆ ಪ್ರೀತಿ ಮತ್ತು ಅವನ ಶಕ್ತಿ ಸಾಮರ್ಥ್ಯಗಳ ಬಗ್ಗೆ ಭಯ ಇವೆರಡರಿಂದಲೇ ಪಾಪಗಳು ಸುಟ್ಟು ಹೋಗುತ್ತವೆ.

ಮನುಷ್ಯನು ಯಾವ ವಸ್ತುಗಳ ಬಗ್ಗೆ ಭಯ ಹೊಂದಿರುತ್ತಾನೋ ಅವುಗಳಿಂದ ದೂರವಿರುತ್ತಾನೆಂಬುದು ಮನುಷ್ಯನ ಸಹಜ ಗುಣವಾಗಿದೆ. ಉದಾಹರಣೆಗೆ ಬೆಂಕಿ ಸುಟ್ಟು ಹಾಕುತ್ತದೆ ಎಂದು ತಿಳಿದವನು ಬೆಂಕಿಗೆ ಕೈಯೊಡ್ಡುವುದಿಲ್ಲ. ಒಂದು ಕಡೆ ವಿಷ ಸರ್ಪವಿದೆ ಎಂದು ತಿಳಿದರೆ ಆ ಮಾರ್ಗವಾಗಿ ಅವನು ಹೋಗುವುದಿಲ್ಲ. ಇದೇ ರೀತಿ ಪಾಪಕೃತ್ಯ ಎಂಬ ವಿಷ ತನ್ನನ್ನು ನಾಶಗೊಳಿಸುವುದು ಎಂಬ ಭಯ ಮನುಷ್ಯನಿಗಿದ್ದರೆ ಮತ್ತು ಅಲ್ಲಾಹನ ಮಹಿಮೆ ಬಗ್ಗೆ ಹೆದರಿಕೆ ಇದ್ದು ಪಾಪಕೃತ್ಯ ಅಲ್ಲಾಹನಿಗೆ ಇಷ್ಟವಲ್ಲ ಎಂದು ದೃಢವಾಗಿ ನಂಬುವುದಾದರೆ ಮತ್ತು ಪಾಪಕೃತ್ಯ ಮಾಡುವವರನ್ನು ಅಲ್ಲಾಹನು ಕಠಿಣವಾಗಿ ಶಿಕ್ಷಿಸುತ್ತಾನೆ ಎಂದು ನಂಬುವುದಾದರೆ ಮನುಷ್ಯನು ಪಾಪಕೃತ್ಯ ಮಾಡಲು ಧೈರ್ಯ ಹೊಂದಲಾರನು. ಅವನು ಭೂಮಿಯಲ್ಲಿ ಮೃತನ ಹಾಗೆ ಚಲಿಸುವನು. ಅವನ ಆತ್ಮ ಯಾವಾಗಲೂ ಅಲ್ಲಾಹನ ಸಮೀಪವಾಗಿರುತ್ತದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಮನುಷ್ಯನು ಅಲ್ಲಾಹನ ಪ್ರೀತಿ ಎಂಬ ಅಗ್ನಿಯಲ್ಲಿ ಬಿದ್ದು ತನ್ನನ್ನು ಸುಟ್ಟು ಹಾಕುವಾಗ ಅವನ ಈ ಮರಣವೇ ಅವನಿಗೆ ಹೊಸ ಜೀವಿತವನ್ನು ನೀಡುವುದು. ನೀವು ತಿಳಿಯುವುದಿಲ್ಲವೇ ಪ್ರೀತಿಯು ಒಂದು ಅಗ್ನಿಯಾಗಿದೆ. ಪಾಪಕೃತ್ಯ ಸಹ ಒಂದು ಅಗ್ನಿಯಾಗಿದೆ. ಆದರೆ ಅಲ್ಲಾಹನ ಬಗ್ಗೆ ಪ್ರೀತಿ ಎಂಬ ಅಗ್ನಿ ಪಾಪದ ಅಗ್ನಿಯನ್ನು ನಂದಿಸುತ್ತದೆ. ಇದೇ ಮೋಕ್ಷದ ಬೇರು ಆಗಿದೆ.

ಅಲ್ಲಾಹನ ಬಗ್ಗೆ ಪ್ರೀತಿಯನ್ನು ನಮ್ಮ ಹೃದಯದಲ್ಲಿ ಉಂಟುಮಾಡಲು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಯಾವ ರೀತಿ ಉಪದೇಶಿಸಿದರು ಎಂಬುವುದಕ್ಕೆ ಒಂದು ಉದಾಹರಣೆ ಹೀಗಿದೆ:

ಒಬ್ಬ ದೇವನಿದ್ದಾನೆ ಎಂದೂ ಅವನಿಗೆ ಎಲ್ಲಾ ಕಾರ್ಯಗಳನ್ನು ಮಾಡಲು ಶಕ್ತಿ ಇದೆ ಎಂದೂ ಇದುವರೆಗೆ ಮನವರಿಕೆ ಮಾಡಿಕೊಳ್ಳದ ಮನುಷ್ಯನು ಎಷ್ಟು ದುರದೃಷ್ಟಶಾಲಿ! ನಮ್ಮ ಸ್ವರ್ಗ ನಮ್ಮ ದೇವನಾಗಿದ್ದಾನೆ. ನಮ್ಮ ಎಲ್ಲಾ ಉನ್ನತ ಅಭಿರುಚಿಗಳು ನಮ್ಮ ದೇವನಲ್ಲಿ ಇವೆ. ಏಕೆಂದರೆ ನಾವು ಅವನನ್ನು ನೋಡಿದ್ದೇವೆ. ಪ್ರತಿಯೊಂದು ಸೌಂದರ್ಯವನ್ನೂ ಅವನಲ್ಲಿ ಕಂಡಿದ್ದೇವೆ. ಜೀವವನ್ನು ಅರ್ಪಿಸಿಯಾದರೂ ಈ ಸಂಪತ್ತು ತೆಗೆದುಕೊಳ್ಳಲು ಅರ್ಹವಾಗಿದೆ. ನಮ್ಮ ಅಸ್ತಿತ್ವವನ್ನು ಸಂಪೂರ್ಣ ಕಳೆದುಕೊಂಡು ಗಳಿಸಬಹುದಾಗಿದ್ದರೆ ಸಹ ಈ ಮಾಣಿಕ್ಯ ಖರೀದಿಸಲು ಯೋಗ್ಯವಾಗಿದೆ. ಓ ಭಾಗ್ಯವಂಚಿತರಾದವರೇ, ಈ ನೀರೊರತೆಯ ಕಡೆಗೆ ದಾವಿಸಿರಿ. ಅದು ನಿಮ್ಮ ಬಾಯಾರಿಕೆಯನ್ನು

ನೀಗಿಸುವುದು. ಇದು ಜೀವನದ ಕಾರಂಜಿಯಾಗಿದೆ. ಅದು ನಿಮ್ಮನ್ನು ರಕ್ಷಿಸುವುದು. ನಾನು ಏನು ಮಾಡಲಿ. ನಾನು ಈ ಶುಭವಾರ್ತೆಯನ್ನೂ ಜನರ ಹೃದಯಗಳಲ್ಲಿ ಯಾವ ರೀತಿ ಸ್ಥಾಪಿಸಲಿ. ನಾನು ಯಾವ ತಮಟೆ ಬಾರಿಸಿ ನಿಮಗೊಬ್ಬ ದೇವನು ಇರುವನು ಎಂದು ಜನರು ಆಲಿಸುವಂತೆ ಡಂಗುರ ಸಾರಲಿ. ಜನರ ಕಿವಿಗಳು ತೆರೆದುಕೊಳ್ಳಲು ಯಾವ ಮದ್ದಿನಿಂದ ನಾನು ಚಿಕಿತ್ಸೆ ನಡೆಸಲಿ. ನೀವು ದೇವನಿಗೆ ಸೇರಿದವರಾದರೆ ಖಂಡಿತವಾಗಿಯೂ ದೇವನು ನಿಮ್ಮವನೇ ಆಗುವನು. ನೀವು ನಿದ್ರಿಸುವಾಗ ದೇವನು ನಿಮಗೋಸ್ಕರ ಎಚ್ಚರಗೊಂಡಿರುವನು. ನೀವು ನಿಮ್ಮ ಶತ್ರುಗಳ ಬಗ್ಗೆ ತಿಳಿಯದೆ ಇದ್ದಾಗ ದೇವನು ನಿಮ್ಮ ಶತ್ರುವನ್ನು ನೋಡುವನು ಮತ್ತು ಅವನ ಗೂಢ ತಂತ್ರಗಳನ್ನು ನಿಷ್ಫಲಗೊಳಿಸುವನು. ನಿಮ್ಮ ದೇವನಲ್ಲಿ ಏನೆಲ್ಲಾ ಶಕ್ತಿ ಸಾಮರ್ಥ್ಯಗಳಿವೆ ಎಂದು ನಿಮಗೆ ತಿಳಿಯದು. ಅದು ನಿಮಗೆ ತಿಳಿದಿರುತ್ತಿದ್ದರೆ ನೀವು ಲೌಕಿಕ ಕಾರಣದಿಂದ ಕಠಿಣ ದುಃಖಕ್ಕೆ ಪಾತ್ರನಾಗುವ ದಿನವನ್ನು ಎಂದೂ ಕಾಣುತ್ತಿರಲಿಲ್ಲ. ಒಬ್ಬ ವ್ಯಕ್ತಿಯ ಬಳಿ ಸಂಪತ್ತಿನ ಒಂದು ಖಜಾನೆಯೇ ಇದ್ದರೆ ಒಂದು ಪೈಸೆ ನಷ್ಟವಾದಾಗ ಅವನು ಅಳುತ್ತಾ ಗೋಳಾಡುತ್ತಾನೆಯೇ? ದೇವನು ನಿಮ್ಮ ಪ್ರತಿಯೊಂದು ಆವಶ್ಯಕತೆಯನ್ನು ಈಡೇರಿಸುವ ಸಾಮರ್ಥ್ಯ ಹೊಂದಿದ್ದಾನೆ ಎಂದು ನಿಮಗೆ ತಿಳಿದಿದ್ದರೆ ನೀವು ಲೌಕಿಕ ಆವಶ್ಯಕತೆಗಳಿಗೋಸ್ಕರ ಈರೀತಿ ಆತಂಕ ಪಡುವುದೇಕೆ? ದೇವನು ಒಂದು ಪ್ರಿಯ ಖಜಾನೆ ಆಗಿದ್ದಾನೆ. ನೀವು ಅವನನ್ನು ಗೌರವಿಸಿರಿ. ಅವನು ನಿಮ್ಮ ಪ್ರತಿಯೊಂದು ಹೆಜ್ಜೆಗೆ ನಿಮ್ಮ ಸಹಾಯಕನಾಗುವನು. ನೀವು ಅವನಿಲ್ಲದೆ ಏನೂ ಅಲ್ಲ. ನಿಮ್ಮ ಸಾಧನ ಸಾಮಾಗ್ರಿಗಳು ಮತ್ತು ನಿಮ್ಮ ಯೋಜನೆಗಳು ಅವನಿಲ್ಲದಿದ್ದರೆ ನಿಷ್ಫಲ. ನೀವು ಅನ್ಯ ಸಮುದಾಯಗಳನ್ನು ಅನುಕರಿಸಬೇಡಿರಿ. ಅವರು ಲೌಕಿಕ ಸಾಮಾಗ್ರಿಗಳ ಆಶ್ರಯದಲ್ಲಿ ಬಿದ್ದು ಹೋಗಿದ್ದಾರೆ. ಹಾವು ಮಣ್ಣು ತಿನ್ನುವ ಹಾಗೆ ಅವರು ಲೌಕಿಕ ಸಾಮಾಗ್ರಿಗಳ ಮಣ್ಣು ತಿನ್ನುತ್ತಿದ್ದಾರೆ. ರಣಹದ್ದು ಮತ್ತು ನಾಯಿಗಳು ಶವ ತಿನ್ನುವ ಹಾಗೆ ಈ ಜನರು ಶವವನ್ನು ತಿನ್ನುತ್ತಿದ್ದಾರೆ. ಅವರು ದೇವನಿಂದ ಬಹಳ ದೂರ ಸರಿದು ಮನುಷ್ಯರನ್ನು ಆರಾಧಿಸ ತೊಡಗಿದ್ದಾರೆ. ಹಂದಿ ಮಾಂಸ ತಿಂದು ಮದ್ಯವನ್ನು ನೀರಿನ ಹಾಗೆ ಬಳಸಿ ಮಿತಿಮೀರಿ ಲೌಕಿಕ ಸಾಮಾಗ್ರಿಗಳನ್ನು ಆಶ್ರಯಿಸಿದ ಕಾರಣ ಮತ್ತು ದೇವನಿಂದ ನೆರವನ್ನು ಬೇಡದ ಕಾರಣ ಅವರು ಮೃತರಾಗಿದ್ದಾರೆ. ಆಕಾಶದ ಆತ್ಮ ಅವರಿಂದ ಹೇಗೆ ಹೊರಟು ಹೋಯಿತೆಂದರೆ ಪಾರಿವಾಳ ಗೂಡಿನಿಂದ ಹಾರಿ ಹೋಗುವ ಹಾಗೆ. ಅವರಲ್ಲಿ ಲೌಕಿಕದ ಆರಾಧನೆಯ ಕುಷ್ಠರೋಗವಿದೆ. ಅದು ಅವರ ಆಂತರಿಕ ಅಂಗಗಳನ್ನು ಕಡಿದು ಹಾಕಿದೆ. ನೀವು ಈ ಕುಷ್ಠರೋಗದ ಬಗ್ಗೆ ಭಯಪಡಿರಿ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ:

"ನೀವು ಈ ದೇವನನ್ನು ಗುರುತಿಸಲು ಬಹಳವಾಗಿ ಪ್ರಯತ್ನ ಮಾಡಿರಿ. ಅವನನ್ನು ನೀವು ಗಳಿಸಿದರೆ ಅದು ನಿಮ್ಮ ಮೋಕ್ಷಕ್ಕೆ ದಾರಿಯಾಗುವುದು ಅವನನ್ನು ಗಳಿಸುವುದು ಮಾರ್ಗದರ್ಶನವಾಗಿದೆ. ಯಾರು ಸತ್ಯ ಹೃದಯದಿಂದ ಮತ್ತು ಪ್ರೀತಿಯಿಂದ ಅವನನ್ನು ಹುಡುಕುತ್ತಾನೋ ಅವನಿಗೆ ಮಾತ್ರ ದೇವನು ಪ್ರಕಟಗೊಳ್ಳುತ್ತಾನೆ. ಅವನಿಗೆ ಸೇರಿದವನಾಗುವವನಿಗೆ ಅವನು ತನ್ನ ಪ್ರಕಾಶವನ್ನು ಹಾಯಿಸುತ್ತಾನೆ. ಯಾರ ಹೃದಯ ಪರಿಶುದ್ಧವಾಗಿವೆಯೋ ಅವು ಅವನ ಸಿಂಹಾಸನವಾಗಿದೆ. ಯಾವ ನಾಲಗೆ ಸುಳ್ಳು, ಬೈಗಳು ಮತ್ತು ನಿಂದೆಗಳಿಂದ ಮುಕ್ತವಾಗಿ ಪರಿಶುದ್ಧವಾಗಿವೆಯೋ ಅವು ಅವನ ಸಂದೇಶವಾಣಿಯ ಸ್ಥಳಗಳಾಗಿವೆ. ಯಾರು ಅವನ ಸಂಪ್ರೀತಿಗಳಿಸುವುದರಲ್ಲಿ ತನ್ನನ್ನು ಅರ್ಪಿಸಿಕೊಳ್ಳುತ್ತಾನೋ ಅವನು ದೇವನ ಅದ್ಭುತ ಶಕ್ತಿ ಪ್ರದರ್ಶನಗಳನ್ನು ಮಾಡುವವನಾಗುತ್ತಾನೆ."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಮ್ಮ ಬಗ್ಗೆ ನಾವು ಯಾವ ಆಧ್ಯಾತ್ಮಿಕ ಮಟ್ಟವನ್ನು ತಲಪಬೇಕೆಂದು ಪ್ರತೀಕ್ಷಿಸಿದ್ದರೋ ಆ ಮಟ್ಟವನ್ನು ತಲಪುವ ಭಾಗ್ಯ ನಮಗೆ ದೊರಕಲಿ. ನಾವು ನಿಷ್ಠಾವಂತರಾಗಿ ಅಲ್ಲಾಹನ ಕಡೆಗೆ ಬಾಗುವವರೂ ಅವನನ್ನು ಪ್ರೀತಿಸುವವರೂ ಅವನ ಪ್ರೀತಿ ಗಳಿಸಿ ಅದನ್ನು ನಮ್ಮ ಜೀವನದ ಭಾಗವನ್ನಾಗಿ ಮಾಡುವವರೂ ಅವನ ಸಂಪ್ರೀತಿಯ ಸ್ವರ್ಗಕ್ಕೆ ಪ್ರವೇಶಿಸುವವರೂ ಆಗುವ ಭಾಗ್ಯ ನಮಗೆ ಲಭಿಸುವಂತಾಗಲಿ – ಆಮೀನ್.

---------------*****---------------


*Friday Sermon delivered by Hadrath Khaleefathul Masih Al Khamis(atba)*
*at Masjid Baithul Futhuh, London on 04-04-2014*

***Kannada Translation:*** M Ubeidullah

***Revised by:*** M P Ibrahim | ***Typing:*** U Basheer Ahmad

***Published By:*** Kannada Isha'at Team, *Ahmadiyya Muslim Jama`at, Karnataka*



**Contact Us**: Darussalam, Ahmadiyya Muslim Mission,
Behind Deltawest Building, Near Railway Level Crossing,
Pandeshwar, Mangalore – 575 001

*Email*: **khutuba.kannada@gmail.com**